ಕರ್ನಾಟಕ ವಿಧಾನಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	432
2	ಸದಸ್ಯರ ಹೆಸರು	:	ಶ್ರೀ ಎನ್ ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
3	ಉತ್ತರಿಸುವ ದಿನಾಂಕ	:	04.02.2021
4	ಉತ್ತರಿಸುವ ಸಚಿವರು	:	ಗೃಹ ಸಚಿವರು

ಪ್ರ. ಸಂ.	ಪ್ರಶ್ನೆ	ಉತ್ತರ
ಅ)	ಪೊಲೀಸ್ ಇಲಾಖೆಯ ಎಫ್.ಎಸ್.ಎಲ್ ನಲ್ಲಿ ಎಂ.ಎಸ್.ಸಿ ಕಂಪ್ಯೂಟರ್ ಸೈನ್ಸ್ ಅಥವಾ ಎಂ.ಟೆಕ್ ವಿದ್ಯಾಭ್ಯಾಸದ ಅರ್ಹತೆ ಹೊಂದಿರಬೇಕಾದ ಫೋಟೋಗ್ರಫಿ ವಿಜ್ಞಾನ ಸಹಾಯಕರ ಹುದ್ದೆಗೆ ಸಿನಿಮಾಟೋಗ್ರಫಿಯಲ್ಲಿ ಡಿಪ್ಲಮೋ ವಿದ್ಯಾಭ್ಯಾಸ ಹೊಂದಿರುವವರನ್ನು ನೇಮಕ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಎಮ್.ಎಸ್.ಸಿ ಕಂಪ್ಯೂಟರ್ ಸೈನ್ಸ್‌ಗೆ ಸಿಸಿಮಾಟೋಗ್ರಫಿಯಲ್ಲಿ ಡಿಪ್ಲಮೋ ಸರಿಸಮಾನ ಎಂಬ ವರದಿಯನ್ನು ನೀಡಿದವರು ಯಾರು; ಈ ರೀತಿಯಾಗಿ ವಿದ್ಯಾಭ್ಯಾಸದ ಅರ್ಹತೆಯನ್ನು ಕಡಿಮೆಗೊಳಸುವ ಅಧಿಕಾರ ಯಾರಿಗಿದೆ;	2001ರ ಚಾಲ್ತಿಯಲ್ಲಿದ್ದ ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಫೋಟೋಗ್ರಫಿ ವಿಜ್ಞಾನ ಸಹಾಯಕರ ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆ ಡಿಪ್ಲಮೋ ಇನ್ ಸಿನಿಮಾಟೋಗ್ರಫಿ ಅಥವಾ ಫೋಟೋಗ್ರಫಿ ವಿದ್ಯಾಭ್ಯಾಸವನ್ನು ಸರ್ಕಾರದಿಂದ ಮಾನ್ಯತೆ ಹೊಂದಿರುವ ಸಂಸ್ಥೆಯಿಂದ ಪಡೆದಿರಬೇಕಾಗಿರುತ್ತದೆ. ಅದರಂತೆ, 2014ನೇ ಸಾಲಿನಲ್ಲಿ ಅರ್ಹ ಅಭ್ಯರ್ಥಿಗಳನ್ನು ಫೋಟೋಗ್ರಫಿ ವಿಭಾಗದಲ್ಲಿ ವೈಜ್ಞಾನಿಕ ಸಹಾಯಕರ ಹುದ್ದೆಗೆ ನೇಮಕಾತಿ ಮಾಡಲಾಗಿರುತ್ತದೆ. ತದನಂತರ, 2017ನೇ ಸಾಲಿನಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಲಾಗಿದ್ದು, ಅದರನ್ವಯ ವೈಜ್ಞಾನಿಕ ಅಧಿಕಾರಿ, ಫೋಟೋಗ್ರಫಿ ಹುದ್ದೆಯ ನೇರ ನೇಮಕಾತಿಗಾಗಿ ನಿಗಧಿಪಡಿಸಿರುವ ವಿದ್ಯಾರ್ಹತೆ ಈ ಕೆಳಕಂಡಂತಿರುತ್ತದೆ. 1)ವಿಜ್ಞಾನ ವಿಷಯದಲ್ಲಿ ಪದವಿ ಹೊಂದಿರಬೇಕು. 2) ಸಿನಿಮಾಟೋಗ್ರಫಿ / ಫೋಟೋಗ್ರಫಿ ಯಲ್ಲಿ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯು ನೀಡಿದ ತತ್ಸಮಾನ ವಿಷಯದಲ್ಲಿ ಡಿಪ್ಲೊಮೊ/ಪದವಿ ಹೊಂದಿರಬೇಕು. 3) ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಂಸ್ಥೆಯಲ್ಲಿ ಫೋಟೋಗ್ರಫಿ / ವಿಡಿಯೋಗ್ರಫಿ ಮತ್ತು ಆಡಿಯೋ ವಿಡಿಯೋ ಉಪಕರಣಗಳ ನಿರ್ವಹಣೆಯಲ್ಲಿ ಎರಡು ವರ್ಷಗಳಿಗಿಂತ ಕಡಿಮೆಯಿಲ್ಲದ ಪ್ರಾಯೋಗಿಕ ತರಬೇತಿ ಅನುಭವ ಹೊಂದಿರಬೇಕು. ಈ ಹಿನ್ನೆಲೆಯಲ್ಲಿ, ಫೋಟೋಗ್ರಫಿ ವಿಜ್ಞಾನ ಸಹಾಯಕರ ಹುದ್ದೆಗೆ ವಿದ್ಯಾರ್ಹತೆಯನ್ನು ಕಡಿಮೆಗೊಳಿಸಲಾಗಿರುವುದಿಲ್ಲ.

ಆ]	ಪೊಲೀಸ್ ಇಲಾಖೆಯ ಎಫ್.ಎಸ್.ಎಲ್. ನಲ್ಲಿ ಸಿನಿಮಾಟೋಗ್ರಫಿಯಲ್ಲಿ ಡಿಪ್ಲಮೋ ವಿದ್ಯಾಭ್ಯಾಸ ಹೊಂದಿದವರು ಓ.ಓ.ಡಿ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು ಡಿಸೆಂಬರ್ 2018 ರಲ್ಲಿ ಅರ್ಹ ವಿದ್ಯಾಭ್ಯಾಸ ಪೂರ್ಣಗೊಳ್ಳುವುದಾಗಿ ಸದನಕ್ಕೆ ಲಿಖಿತ ಮಾಹಿತಿ ನೀಡಲಾಗಿದೆ; ಈ ಸರ್ಕಾರಿ ನೌಕರರು ಉನ್ನತ ಶಿಕ್ಷಣ ಪಡೆಯಲು ಸರ್ಕಾರದ ಅನುಮತಿ ಕೋರಿ ಮನವಿ ಸಲ್ಲಿಸಿರುತ್ತಾರೆಯೇ; ಸಲ್ಲಿಸಿದ್ದಲ್ಲಿ ಸದರಿ ಮನವಿಯ ಪ್ರತಿ ಹಾಗೂ ಕಛೇರಿಯಲ್ಲಿ ಸದರಿ ಮನವಿಗಳನ್ನು ಸ್ವೀಕರಿಸಿದ ದಿನಾಂಕದೊಂದಿಗೆ ಮಾಹಿತಿ ನೀಡುವುದು:	ಉನ್ನತ ಶಿಕ್ಷಣ ಪಡೆಯಲು ಸರ್ಕಾರದ ಅನುಮತಿ ಕೋರಿ ಮನವಿ ಸಲ್ಲಿಕೆಯಾಗಿರುವುದಿಲ್ಲ.
ಇ]	ಪೊಲೀಸ್ ಇಲಾಖೆಯ ಎಫ್.ಎಸ್.ಎಲ್ ನಲ್ಲಿ ಸಿನಿಮಾಟೋಗ್ರಫಿಯಲ್ಲಿ ಡಿಪ್ಲಮೋ ವಿದ್ಯಾಭ್ಯಾಸ ಹೊಂದಿದವರು ಓ.ಓ.ಡಿ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು, ಇವರಿಗೆ ದೂರ ಶಿಕ್ಷಣದ ಉನ್ನತ ಶಿಕ್ಷಣ ಪಡೆಯಲು ಸರ್ಕಾರ ಅನುಮತಿ ನೀಡಿದಲ್ಲಿ, ಸದರಿ ಆದೇಶದ ಪ್ರತಿ ನೀಡುವುದು: ಸದರಿಯವರಿಗೆ ಯಾವ ದಿನಾಂಕದಂದು ಉನ್ನತ ಶಿಕ್ಷಣ ಪಡೆಯಲು ಅನುಮತಿಸಲಾಗಿದೆ. ಸರ್ಕಾರದ ಅನುಮತಿ ಇಲ್ಲದೇ ಉನ್ನತ ಶಿಕ್ಷಣ ಮತ್ತು ಇತರೇ ಲಾಭದಾಯಕ ಕೆಲಸಕಾರ್ಯಗಳನ್ನು ನಿರ್ವಹಿಸುವುದು ಸರ್ಕಾರಿ ನೌಕರರ ನಡತೆ ನಿಯಮಾವಳಿಗೆ ಅನುಗುಣವಾಗಿದೆಯೇ; ಈ ಕುರಿತು ಸರ್ಕಾರದ ನಿಲುವೇನು?	ಉದ್ಭವಿಸುವುದಿಲ್ಲ.

ಸಂಖ್ಯೆ: ಒಇ 11 ಪಿಇಐ 2021

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು